

ಅತ್ಯಗತ್ಯವಾಗಿ ಗಮನಿಸಬೇಕು. ‘ಪ್ರಜಾಪ್ರಭುತ್ವ ಸರ್ವಾಧಿಕಾರದತ್ತ ತಿರುಗುವ ಅಪಾಯ ಇದ್ದೇ ಇದೆ’ ಎಂದು ಅಂದೇ ಎಚ್ಚರಿಸಿದ ಅಂಬೇಡ್ಕರ್, ರಾಜಕೀಯ ಚಿಂತಕ ಜಾನ್ ಸ್ಟುವರ್ಟ್ ಮಿಲ್ ಹೇಳಿದ ಮಾತನ್ನು ಉಲ್ಲೇಖಿಸುತ್ತಾರೆ: ‘ಜನರು ತಮ್ಮ ಸ್ವಾತಂತ್ರ್ಯವನ್ನು ಯಾವುದೇ ‘ದೊಡ್ಡ ಮನುಷ್ಯ’ ಎನ್ನಲಾಗುವವನ ಪಾದಗಳಿಗೆ ಎಂದಿಗೂ ಒಪ್ಪಿಸಬಾರದು. ತಮ್ಮ ನಾಡಿನ ಸಂಸ್ಥೆಗಳನ್ನು ಬುಡಮೇಲು ಮಾಡುವ ಅಧಿಕಾರವನ್ನು ಅವನಿಗೆ ಎಂದೂ ಕೊಡಬಾರದು.’ ಈ ಉಲ್ಲೇಖದ ಜೊತೆಗೇ ಅಂಬೇಡ್ಕರ್ ಹೇಳುವ ಮತ್ತೊಂದು ನಿಷ್ಠುರವಾದ ಮಾತು ಇದು: ‘ಬೇರೆ ಯಾವುದೇ ದೇಶದ ರಾಜಕೀಯಕ್ಕಿಂತ ಇಂಡಿಯಾದ ರಾಜಕೀಯದಲ್ಲಿ ಭಕ್ತಿ ಅಥವಾ ನಾಯಕಾರಾಧನೆ ಅತಿ ಹೆಚ್ಚು. ರಾಜಕೀಯದಲ್ಲಿ ಈ ಬಗೆಯ ಭಕ್ತಿ ಅಥವಾ ನಾಯಕಾರಾಧನೆ, ಪತನದ ಹಾಗೂ ಈ ನಾಯಕಾರಾಧನೆಯ ಪರಿಣಾಮವಾಗಿ ಸರ್ವಾಧಿಕಾರದತ್ತ ನಡೆಯುವ ಸೂಚನೆಯಾಗಿರುತ್ತದೆ.’

## 5

ಐ.ಸಿ.ಎಚ್.ಆರ್. ಕೆಲವು ವರ್ಷಗಳ ಕೆಳಗೆ ಸಂಗ್ರಹಿಸಿದ ಬ್ರಿಟಿಷ್ ಕಾಲದ ಸರ್ಕಾರಿ ದಾಖಲೆಗಳ ಪ್ರಕಾರ, 12,500 ಭಾರತೀಯರು 1857ರಿಂದ 1947ರವರೆಗೆ ಹುತಾತ್ಮರಾದರೆಂಬ ಅಂಕಿ ಅಂಶಗಳಿವೆ. ಆದರೆ ಇದು ಕೇವಲ ಬ್ರಿಟಿಷ್ ಸರ್ಕಾರ ದಾಖಲಿಸಿದ ಬಲಿದಾನದ ದಾಖಲೆ, ಅಷ್ಟೆ. ಆದರೆ ಬ್ರಿಟಿಷ್ ಆಡಳಿತ ಸುಮಾರು ಮೂರೂವರೆ ಕೋಟಿ ಭಾರತೀಯರ ಸಾವುನೋವುಗಳಿಗೆ ಹಲವು ಬಗೆಗಳಲ್ಲಿ ಕಾರಣವಾಗಿದೆಯೆಂಬುದನ್ನು ಕುರಿತ ಅಂಕಿ ಅಂಶಗಳನ್ನು ಶಶಿ ತರೂರ್ ಥರದವರು ಕೊಡಲೆತ್ನಿಸಿದ್ದಾರೆ. ಜೊತೆಗೆ ಭಾರತದಿಂದ ಅಪಹರಿಸಿದ ಸಂಪನ್ಮೂಲವನ್ನು ಬ್ರಿಟನ್ ಈಗ ಭಾರತಕ್ಕೆ ವಾಪಸ್ ಕೊಡಬೇಕು ಎಂಬ ವಾದವನ್ನೂ ಶಶಿ ತರೂರ್ ಮಂಡಿಸಿದ್ದರು. ಇಂಥ ವಾಸ್ತವಗಳ ಹಿನ್ನೆಲೆಯಲ್ಲಿ ಮೂರೂವರೆ ಕೋಟಿ ಭಾರತೀಯರ ಬಲಿದಾನದ ಫಲದಿಂದ ಇವತ್ತು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆಂಬ ವಿನಯ, ಕೃತಜ್ಞತೆ ಹಾಗೂ ಜವಾಬ್ದಾರಿ ನಮ್ಮೊಳಗಿರಬೇಕಾದ್ದು ಅತ್ಯಗತ್ಯ. ಮೂರೂವರೆ ಕೋಟಿ ಜನರ ಹೋರಾಟ, ಬಲಿದಾನಗಳು ಒಂದೆಡೆ; ಮತ್ತೊಂದೆಡೆ ಹೋರಾಟದಲ್ಲಿ ಬದುಕಿ ಉಳಿದರೂ ಕೊನೆಯವರೆಗೂ ಬಡತನದಲ್ಲೇ ಉಳಿದು ಅಳಿದ ಕೋಟ್ಯಂತರ ಸಾಮಾನ್ಯ ಮಹಿಳೆಯರು ಹಾಗೂ ಪುರುಷರ, ಎಲ್ಲ ಹಂತದ ನಾಯಕ, ನಾಯಕಿಯರ ಶ್ರಮದ ಫಲವಾಗಿ ದಕ್ಕಿದ ಸ್ವಾತಂತ್ರ್ಯ ಇದು. ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೇಬೇಕಾದ ತಲೆಮಾರುಗಳು ಈ ಮೇಲೆ ಹೇಳಿದ ಅಂಬೇಡ್ಕರ್ ಅವರ ಮಾತನ್ನು ಎಚ್ಚರಿಕೆಯಿಂದ ಕೇಳಿಸಿಕೊಳ್ಳಬೇಕು. ಸ್ವಾತಂತ್ರ್ಯ ಹರಣ ಮಾಡುವ ಶಕ್ತಿಗಳ ಬಗ್ಗೆ ಸದಾ ಎಚ್ಚರವಾಗಿರಬೇಕು.

ಹಾಗೆಯೇ ಇವತ್ತು ಎಲ್ಲ ಮಾಧ್ಯಮಗಳಲ್ಲಿ ತಂತಮ್ಮ ಸ್ವಾತಂತ್ರ್ಯ ಕುರಿತು ಗಟ್ಟಿದನಿಯಲ್ಲಿ ಮಾತಾಡುವವರು ಇತರರ ಸ್ವಾತಂತ್ರ್ಯ ರಕ್ಷಣೆಯ ಬಗೆಗೂ ಸರಿಯಾಗಿ ಯೋಚಿಸಬೇಕಾಗುತ್ತದೆ. ಯಾವುದೇ ಶ್ರೇಷ್ಠ, ಅಧಿಕೃತ ಚರಿತ್ರೆಯ ಪುಸ್ತಕಗಳನ್ನೂ ಓದದೆ, ಚರಿತ್ರೆಯ ಹೆಸರಿನಲ್ಲಿ ಯಾರೋ ಹರಿಬಿಡುತ್ತಿರುವ ಚಿಂದಿ ಚೂರು, ತಿರುಚು, ವಿಕೃತ ಮಾಹಿತಿಗಳೂ ಕೂಡ ಅಲ್ಪಸಂಖ್ಯಾತ ಸಮುದಾಯಗಳ ಸ್ವಾತಂತ್ರ್ಯಹರಣ ಮಾಡುತ್ತಿವೆ. ಇವತ್ತು ಈ ನೀಚ ಕೆಲಸಗಳಿಗೆಂದೇ ನಿಯೋಜಿಸಲ್ಪಟ್ಟ ಸೈಬರ್ ಮಾರುಕಟ್ಟೆಗಳಿವೆ. ಯುವಜನರ ಮನಸ್ಸನ್ನು ವಿಕಾರಗೊಳಿಸಿ ಹಾದಿ ತಪ್ಪಿಸುತ್ತಿರುವ ಇಂಥ ಶಕ್ತಿಗಳು ಹೊಸ ತಲೆಮಾರುಗಳು ಸ್ವತಂತ್ರವಾಗಿ ಯೋಚಿಸುವ ಮೆದುಳನ್ನೇ ನಾಶ ಮಾಡುತ್ತಿರುತ್ತವೆ. ಆತ್ಮಪರೀಕ್ಷೆಯಿಲ್ಲದ ಸಾರ್ವಜನಿಕ ಮಾತು ಹಾಗೂ ಉತ್ತಮ ಚಿಂತನೆಯಿಂದ ಮೂಡದ ಕ್ಷಿಪ್ರ ಬರವಣಿಗೆಗಳು ಇಡೀ ಜನತೆಯ ಹಾಗೂ ಸಮುದಾಯಗಳ ಸ್ವಾತಂತ್ರ್ಯ ಹರಣ ಮಾಡುತ್ತಿರುತ್ತವೆ.

ಸ್ವತಂತ್ರ ಅಭಿವ್ಯಕ್ತಿಯ ಬಗ್ಗೆ ಕೊಂಚವಾದರೂ ಪ್ರಜ್ಞೆ, ಕಾಳಜಿ ಉಳ್ಳವರು ಸ್ವಾತಂತ್ರ್ಯ ಚಳವಳಿಯ ಮಹಾಯುದ್ಧದ ಕಾಲದಲ್ಲಿ ಕೂಡ ತಿಲಕ್, ಪಟೇಲ್, ಗಾಂಧಿ, ನೆಹರೂ, ಅಂಬೇಡ್ಕರ್ ಥರದ ನಾಯಕರು ಬಳಸಿದ ಮಾತು, ಬರಹಗಳ ಸರಳ ಗಂಭೀರ ಭಾಷೆಯ ಆರೋಗ್ಯವನ್ನು ಅರಿಯಲು ಅವರ ಕೆಲವು ಬರಹಗಳನ್ನಾದರೂ ಓದಲೇಬೇಕು. ಆ ಮೂಲಕ ಜವಾಬ್ದಾರಿಯುತ ಸ್ವತಂತ್ರ ಬರವಣಿಗೆ ಹುಟ್ಟಿಸುವ ಆರೋಗ್ಯವನ್ನು ಹಾಗೂ ದೇಶ ಕಟ್ಟುವ ಬರವಣಿಗೆಯ ದೊಡ್ಡ ಮಾದರಿಗಳನ್ನು ಅರಿಯುವುದು ಕೂಡ ಸ್ವಾತಂತ್ರ್ಯೋತ್ಸವ–75ರ ಮುಖ್ಯ ಭಾಗವಾಗಬೇಕು.

ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನಮ್ಮ ಈ ಕಾಲದಲ್ಲಿ ಎಲ್ಲ ಬಗೆಯ ಸಮಾನತೆ ಹಾಗೂ ಸ್ವಾತಂತ್ರ್ಯಗಳ ಹುಡುಕಾಟವೆಂದು ಆರೋಗ್ಯಕರವಾಗಿ ವಿವರಿಸಿಕೊಳ್ಳುವುದರಿಂದ ಹಾಗೂ ವಿಸ್ತರಿಸುವುದರಿಂದ ಮಾತ್ರ ನಾವು 75 ವರ್ಷಗಳ ಕೆಳಗೆ ಪಡೆದ ಅಪೂರ್ವ ಸ್ವಾತಂತ್ರ್ಯದ ಸಾಧ್ಯತೆಗಳು ಹಲವು ದಿಕ್ಕಿನಲ್ಲಿ ರೆಂಬೆಯೊಡೆಯುತ್ತವೆ ಎಂಬ ನಂಬಿಕೆ ಹಾಗೂ ವಿಶ್ವಾಸದ ಆತ್ಮಸಾಕ್ಷಿಯ ಬಾವುಟಗಳು ಭಾರತದ ಎಲ್ಲ ಮನೆ ಮನಗಳಲ್ಲಿ ಹಾರಾಡುವಂತಾಗಲಿ.

ಪ್ರತಿಕ್ರಿಯಿಸಿ: feedback@sudha.co.in